
## ಮಾತಿನ ನೆರಳು

ನೀನು
ಬೆಳಕಿನ ಪುಂಜ
ನಿನ್ನನ್ನು ನೋಡಬಹುದು,
ಹಿಡಿಯಲಾಗುವುದಿಲ್ಲ.
ಮಾತಿಗೆ ಇನ್ನೊಂದು ಮಾತು ಆಡಬಹುದಷ್ಟೆ
ಮಾತು ಚಿಗುರುವುದಿಲ್ಲ.
ಮಾತು ಮಾತಿನಾಚೆಯ ಸ್ಪಂದನ
ಮುಟ್ಟುವ ನಿನ್ನ ಮಾತು,
ಕಾವ್ಯದಾಕಾಶದಾಚೆ ಇರಬಹುದು ಏನೊ
ಅದು ನಿನ್ನ ನೆಲೆ,
ದುರ್ಗಮ ದಾರಿಗಳಾಚೆ ಕಂಡುಕೊಂಡ ಬಯಲು
ನಿನಗೆ ಮಾತ್ರ ಕೇಳಿಸುವ ಉನ್ನತ ಸ್ವರಗಳ ನಾದ

ನನ್ನ ಕನಸಿನಲ್ಲಿ ನಿನ್ನ ಮಾತಿನ ನೆರಳು
ನಾನೀಗ ನೆರಳ ಸಂಗಾತಿ





## ಕವಿತೆಯ ಸಾವು ಮತ್ತು ಹುಟ್ಟು

ಒಮ್ಮೊಮ್ಮೆ
ಗರ್ಭದೊಳಗೆ ಸಾಯುವಂತೆ ಕೂಸು
ಬೀಜದೊಳಗೆ ಸಾಯುವಂತೆ ಮರ
ಮಾತಿನಲ್ಲಿ ಸಾಯುವಂತೆ ಮೌನ
ಎಚ್ಚರದಲ್ಲಿ ಸಾಯುವಂತೆ ಕನಸು
ಸ್ಪರ್ಶದಲ್ಲಿ ಸಾಯುವಂತೆ ಸುಖ
ಭಾಷೆಯಲ್ಲೂ ಸಾಯುವುದು ಕವಿತೆ.

ಒಮ್ಮೊಮ್ಮೆ
ಶಿಲೆಯೊಳಗೆ ಮೂಡುವಂತೆ ಶಿಲ್ಪ
ಮಣ್ಣೊಳಗೆ ತೋರುವಂತೆ ಚಿನ್ನ
ಶಬ್ದದಿಂದ ಹೊಮ್ಮುವಂತೆ ಸಂಗೀತ
ಬಣ್ಣದೊಳಗೆ ಅರಳುವಂತೆ ಚಿತ್ರ
ಅಗ್ನಿಯಲ್ಲಿ ರೂಪುಗೊಳ್ಳುವಂತೆ ಬಿಂಬ
ಭಾಷೆಯಲ್ಲೂ ಜೀವತಳೆಯುವುದು ಕವಿತೆ.